ಅ. ಶಿವಮೊಗ್ಗ ನಗರದಲ್ಲಿ ಹೊಸ ಪೊಲೀಸ್ ಠಾಣೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ:(ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ. ಶಿವಮೊಗ್ಗ ನಗರದಲ್ಲಿ 1 ಸಂಚಾರ ಪೊಲೀಸ್ ಠಾಣೆ ಮತ್ತು 1 ಮಹಿಳಾ ಪೊಲೀಸ್ ಠಾಣೆ ಸೇರಿದಂತೆ ಒಟ್ಟು 5 ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ.

ನಗರದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಮತ್ತೊಂದು ಪೊಲೀಸ್ ಠಾಣೆಯ ಅವಶ್ಯಕತೆ ಇದೆಯೆಂದು ಕಂಡುಬಂದಿರುತ್ತದೆ.

ಆ. ಶಿವಮೊಗ್ಗ ನಗರದ ತುಂಗಾನಗರದಲ್ಲಿ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ.

ಚಿಂತಾಮಣಿ ತಾಲ್ಲೂಕಿನ ಗ್ರಾಮಗಳ ಹರಿಜನ ಬಸ್ತಿಗಳಲ್ಲಿ ವಿದ್ಯುತ್ ವ್ಯವಸ್ಥೆ

1381(1713) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಂತಾಮಣಿ ತಾಲ್ಲೂಕಿನ ಗ್ರಾಮಗಳ ಹರಿಜನ ಬಸ್ತಿಗಳಲ್ಲಿ ವಿದ್ಯುತ್ ಸೌಕರ್ಯ ಕಲ್ಪಿಸುವ ಬಗ್ಗೆ ಪಟ್ಟಿಯನ್ನು ಕೆಪಿಟಿಸಿಎಲ್‌ರವರಿಗೆ ಸಲ್ಲಿಸಿರುವುದು ನಿಜವೇ?

ಆ. ಮೇಲೆ ನಮೂದಿಸಿದ ಗ್ರಾಮಗಳ ಹರಿಜನ ಬಸ್ತಿಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯ ಇಲ್ಲದೆ ಹರಿಜನ ಕುಟುಂಬಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಈ ಬಗ್ಗೆ ಸರ್ಕಾರ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಸರಿಯೇ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ. ಇಲ್ಲ

ಆ. ಹರಿಜನ ಬಸ್ತಿಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯವಿಲ್ಲದೇ ಹರಿಜನ ಕುಟುಂಬಗಳಿಗೆ ತೊಂದರೆಯಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದಾಗ್ಯೂ ಚಿಂತಾಮಣಿ ತಾಲ್ಲೂಕಿನಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿಯ ಹರಿಜನ ಹೊಸವಾಸಸ್ಥಳ ಹಾಗೂ ಹ್ಯಾಮ್ಲೆಟ್‌ಗಳಿಗೆ 2002-03 ನೇ ಸಾಲಿನಲ್ಲಿ ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಗ್ರಾಮದ ಹೆಸರು	ಉಪವಿಭಾಗ	ಶರಾ
ಬಿಂಗಾವಹಳ್ಳಿ	ಚಿಂತಾಮಣಿ ನಗರ ಉಪವಿಭಾಗ	ಹರಿಜನ ಬಸ್ತಿ
ಎ. ಗುಟ್ಟಹಳ್ಳಿ	ಚಿಂತಾಮಣಿ ನಗರ ಉಪವಿಭಾಗ	ಹರಿಜನ ಬಸ್ತಿ
ಯರ್ರಬೈಗೇನಹಳ್ಳಿ	ಚಿಂತಾಮಣಿ ನಗರ ಉಪವಿಭಾಗ	ಹ್ಯಾಮ್ಲೆಟ್
ಬುರಡಿಗುಂಟೆ	ಚಿಂತಾಮಣಿ ಗ್ರಾಮೀಣ ಉಪವಿಭಾಗ	ಹರಿಜನ ಬಸ್ತಿ
ವೆಂಕಟರಾಯನಕೋಟೆ	ಚಿಂತಾಮಣಿ ಗ್ರಾಮೀಣ ಉಪವಿಭಾಗ	ಹ್ಯಾಮ್ಲೆಟ್
ಸಂಗೇಂಡಹಳ್ಳಿ	ಕೋಲಾರ ಉಪ ವಿಭಾಗ	ಹರಿಜನ ಬಸ್ತಿ

ಸರ್ಕಾರ ಯಾವುದೇ ವಿಳಂಬ ನೀತಿಯನ್ನು ಅನುಸರಿಸುತ್ತಿಲ್ಲ.